ಕರ್ನಾಟಕ ಸರ್ಕಾರ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ
ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು–560009
ದೂರವಾಣಿ ಸಂ : ಆಡಳಿತ : 080-28015635/36/46 ಕಾಮಗಾರಿ : 080-28015640/41 ಲೆಕ್ಕಪತ್ರ : 080-28015634/37
ಫ್ಯಾಕ್ಸ್ : 080-22879901, 28015644/45/34 ಇ–ಮೇಲ್ : md@kridl.net ವೆಬ್ ಸೈಟ್ : www.kridl.org

ಸಂಖ್ಯೆ:ಕೆಆರ್‌ಐಡಿಎಲ್/ಆಡಳಿತ/ಮು.ಅ./ಹಿಂಬಡ್ತಿ/2018-19 ದಿನಾಂಕ 24-04-2018

## ಅಧಿಕೃತ ಜ್ಞಾಪನಾ

ವಿಷಯ: ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲ್ ಸಂ.2368/2011 ಹಾಗೂ ಸಂಬಂಧಿಸಿದ ಸಿವಿಲ್ ಅಪೀಲುಗಳಲ್ಲಿ ದಿನಾಂಕ 09-02-2017 ರಂದು ನೀಡಿರುವ ತೀರ್ಪಿನನ್ವಯ ವರಿಷ್ಠತೆಯಲ್ಲಿ ಸ್ಥಾನ ಲಭ್ಯವಾಗದೆ ಇರುವ ಅಧಿಕಾರಿಗಳನ್ನು ಹಿಂಬಡ್ತಿಗೊಳಿಸುವ ಕುರಿತು.

ಉಲ್ಲೇಖ:1) ಮಾನ್ಯ ಸರ್ವೋಚ್ಚ ನ್ಯಾಯಾಲಯವು ಬಿ.ಕೆ.ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದ ಸಿವಿಲ್ ಅಪೀಲ್ ಸಂ.2368/2011 ಹಾಗೂ ಸಂಬಂಧಿಸಿದ ಸಿವಿಲ್ ಅಪೀಲುಗಳಲ್ಲಿ ದಿನಾಂಕ 09-02-2017 ರಂದು ನೀಡಿರುವ ತೀರ್ಪು.

2) ಕರ್ನಾಟಕ ಸರ್ಕಾರದ ನಡವಳಿ ಸಂ.ಡಿಪಿಎಆರ್ 182 ಎಸ್‌ಆರ್‌ಆರ್ 2011 ಬೆಂಗಳೂರು ದಿನಾಂಕ 06-05-2017 ರನ್ವಯ ನೀಡಿರುವ ಮಾರ್ಗಸೂಚಿಗಳು.

3) ಸಂಖ್ಯೆ:ಕೆಆರ್‌ಐಡಿಎಲ್/ಆಡಳಿತ/ಅಧಿಕಾರಿಗಳ ಜೇಷ್ಠತಾ ಪಟ್ಟಿ/2018-19 ದಿ:13-04-2018

** ** ** ** **

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಬಿ.ಕೆ.ಪವಿತ್ರ ಮತ್ತು ಇತರರು – ವಿರುದ್ಧ – ಯೂನಿಯನ್ ಆಫ್ ಇಂಡಿಯಾ ಪ್ರಕರಣದ ಸಿವಿಲ್ ಅಪೀಲ್ ಸಂ. 2368/2011 ಹಾಗೂ ಸಿವಿಲ್ ಅಪೀಲು ಸಂ.2369/2011, 2370-73/2011, 2374-77/2011, 2378/2011, 2379/2011, 4320-4327/2011 ಮತ್ತು 5280-5286/2011 ರಲ್ಲಿ (ಉಲ್ಲೇಖ-1) ನೀಡಿರುವ ತೀರ್ಪಿನಲ್ಲಿ "Karnataka Determination of Seniority of the Government Servants Promoted on the basis of Reservation (to the posts in the Civil Services of the State) Act, 2002 (Section 3 & 4) which provides consequential seniority to those promoted under reservation is *Ultra vires* Articles 14 and 16 of the Constitution" ಎಂದು ಈ ಕೆಳಕಂಡಂತೆ ಆದೇಶಿಸಿರುತ್ತದೆ.

"In view of the above, we allow these appeals, set aside the impugned judgment and declare provisions of the impugned Act to the extent doing away with the "Catch up" rule providing for consequential seniority under section 3 & 4 to persons belonging to SCs and STs on promotions against roster points to be ultra vires Articles 14 and 16 of the Constitutions. The judgment will not affect those who have already retired and will not affect financial benefits already taken. Consequential promotions granted to serving employees, based on consequential seniority benefit will be treated as ad-hoc and liable to be reviewed. Seniority list may be now revised in the light of this judgment within three months from today.

ಕರ್ನಾಟಕ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಉಲ್ಲೇಖ-2 ರ ಆದೇಶದಲ್ಲಿ ಸದರಿ ನ್ಯಾಯಾಲಯದ ಆದೇಶದ ಮೇರೆಗೆ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಅರೆ ಸರ್ಕಾರಿ/ ನಿಗಮ/ ಮಂಡಳಿ/ ಸಾರ್ವಜನಿಕ ಉದ್ದಿಮೆಗಳಲ್ಲಿ ದಿನಾಂಕ 27-04-1978 ರಿಂದ ಹೊರಡಿಸಲಾಗಿರುವ ನೌಕರರ ಸೇವಾ ಪರಿಷ್ಕೃತ ಪಟ್ಟಿಗಳನ್ನು ಪರಿಷ್ಕರಿಸಿ ಹೊರಡಿಸುವಂತೆ ಆದೇಶಿಸಿ ತತ್ಸಂಬಂಧ ಮಾರ್ಗಸೂಚಿಯನ್ನು ಹೊರಡಿಸಿರುತ್ತದೆ.

. . . . . 2

ಕರ್ನಾಟಕ ಸರ್ಕಾರ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ
ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು-560009
ದೂರವಾಣಿ ಸಂ : ಆಡಳಿತ : 080-28015635/36/46 ಕಾಮಗಾರಿ : 080-28015640/41 ಲೆಕ್ಕಪತ್ರ : 080-28015634/37
ಫ್ಯಾಕ್ಸ್ : 080-22879901, 28015644/45/34 ಇ-ಮೇಲ್ : md@kridl.net ವೆಬ್ ಸೈಟ್ : www.kridl.org



ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಉಲ್ಲೇಖ-2 ರ ಆದೇಶದಲ್ಲಿ ಸದರಿ ನ್ಯಾಯಾಲಯದ ಆದೇಶದ ಮೇರೆಗೆ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಅರೆ ಸರ್ಕಾರಿ/ ನಿಗಮ/ ಮಂಡಳ/ ಸಾರ್ವಜನಿಕ ಉದ್ದಿಮೆಗಳಲ್ಲಿ ದಿನಾಂಕ 27-04-1978 ರಿಂದ ಹೊರಡಿಸಲಾಗಿರುವ ನೌಕರರ ಸೇವಾ ಪರಿಷ್ಕೃತ ಪಟ್ಟಿಗಳನ್ನು ಪರಿಷ್ಕರಿಸಿ ಹೊರಡಿಸುವಂತೆ ಆದೇಶಿಸಿ ತತ್ಸಂಬಂಧ ಮಾರ್ಗಸೂಚಿಯನ್ನು ಹೊರಡಿಸಿರುತ್ತದೆ. ಅದರಂತೆ ನಿಗಮದಲ್ಲಿ ದಿನಾಂಕ 27-04-1978 ರಿಂದ ಈವರೆಗಿನ ಪರಿಷ್ಕೃತ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿನಾಂಕ 13-04-2018 ರಂದು ಜಾರಿ ಮಾಡಿರುವ ಅಧಿಸೂಚನೆ ಮೂಲಕ ಪ್ರಕಟಿಸಲಾಗಿದೆ.

ಈಗ ಪ್ರಕಟಿಸಲಾಗಿರುವ ಅಂತಿಮ ಪರಿಷ್ಕೃತಾ ಪಟ್ಟಿಯಲ್ಲಿ ಸ್ಥಾನ ಲಭ್ಯವಾಗದೇ ಇರುವ ಅಧಿಕಾರಿ/ ನೌಕರರ ವಿವರಗಳನ್ನು ಪರಿಶೀಲಿಸಲಾಗಿದೆ. ಅದರಂತೆ ಈ ಕೆಳಕಂಡ ಅಧಿಕಾರಿಯವರುಗಳನ್ನು ಮುಖ್ಯ ಅಭಿಯಂತರರು ವೃಂದದಿಂದ ಅಧೀಕ್ಷಕ ಅಭಿಯಂತರರು (ಸಿವಿಲ್) ವೃಂದಕ್ಕೆ ಹಿಂಬಡ್ತಿಗೊಳಿಸಲಾಗಿದೆ. ಸದರಿಯವರ ಸ್ಥಳ ನಿಯೋಜನಾ ಆದೇಶವನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು. ಹಿಂಬಡ್ತಿಗೊಂಡ ಸಂಬಂಧಪಟ್ಟ ಅಧಿಕಾರಿಯವರು ನಿಗಮದ ಮುಖ್ಯಸ್ಥರಲ್ಲಿ ವರದಿ ಮಾಡಿಕೊಳ್ಳುವುದು.

| ಕ್ರ. ಸಂ. | ಹೆಸರು ಶ್ರೀಯುತರು | ಪ್ರಸ್ತುತ ಹುದ್ದೆ ಮತ್ತು ಕಾರ್ಯಸ್ಥಳ | ಹಿಂಬಡ್ತಿಗೊಳ್ಳುವ ಹುದ್ದೆ | ವೇತನ ಶ್ರೇಣಿ |
|---|---|---|---|---|
| 01 | ಹೆಚ್.ಪಿ.ರಾಜಶೇಖರ ಮೂರ್ತಿ | ಮುಖ್ಯ ಅಭಿಯಂತರರು (ದಕ್ಷಿಣ), | ಅಧೀಕ್ಷಕ ಅಭಿಯಂತರರು (ಸಿವಿಲ್) | ರೂ.40050-1050-45300-1200-52500-1350-56550 |

ಈ ಆದೇಶವು ತಕ್ಷಣದಿಂದ ಜಾರಿಗೆ ಬರುತ್ತದೆ. ಸದರಿಯವರು ಹಿಂಬಡ್ತಿಗೊಳ್ಳುವ ಹುದ್ದೆಯ ವೇತನ ಶ್ರೇಣಿಯಲ್ಲಿ ವೇತನವನ್ನು ಭವಿಷ್ಯವರ್ತಿಯಾಗಿ ನಿಗಧಿಗೊಳಿಸುವುದು. ಅವರು ಮೇಲ್ದರ್ಜೆ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಯ ವೇತನದ ವ್ಯತ್ಯಾಸದ ಮೊತ್ತವನ್ನು ಕಡಿತಗೊಳಿಸತಕ್ಕದ್ದಲ್ಲ.

Raj
24/04/2018

(ಡಾ.ಆರ್.ರಾಜು, ಭಾ.ಅ.ಸೇ.,)
ವ್ಯವಸ್ಥಾಪಕ ನಿರ್ದೇಶಕರು,
ಕೆಆರ್ಐಡಿಎಲ್, ಬೆಂಗಳೂರು.

ಗೆ,
ಸಂಬಂಧಿಸಿದ ಅಧಿಕಾರಿಗಳಿಗೆ

ಪ್ರತಿಯನ್ನು:
- ಮುಖ್ಯ ಅಭಿಯಂತರರು (ಕೇಂದ್ರೀಯ/ ದಕ್ಷಿಣ/ ಉತ್ತರ), ಕೆಆರ್ಐಡಿಎಲ್, ಕೇಂದ್ರ ಕಛೇರಿ.
- ಮುಖ್ಯ ಹಣಕಾಸು ಅಧಿಕಾರಿ-1 & 2, ಕೆಆರ್ಐಡಿಎಲ್, ಕೇಂದ್ರ ಕಛೇರಿ.
- ಮುಖ್ಯ ಆಡಳಿತಾಧಿಕಾರಿಗಳು, ಕೆಆರ್ಐಡಿಎಲ್, ಕೇಂದ್ರ ಕಛೇರಿ.
- ಎಲ್ಲಾ ವಲಯಗಳ ಅಧೀಕ್ಷಕ ಅಭಿಯಂತರರುಗಳು, ಕೆಆರ್ಐಡಿಎಲ್.
- ಸಂಬಂಧಿಸಿದ ಕಡತಗಳಿಗೆ.